ನನ್ನ ಓದು



ಕಾವ್ಯಾ ಕಡಮೆ

# ಹೃದಯವ ಕೊಳೆಯಿಸುವುದೆಲ್ಲವ ತೆಗೆದೆಸೆದಿರುವೆ...

**“ದೇವರು, ಮನುಜರು- ಎಲ್ಲ ಬಂಧ ಕಡಿದು ಹೃದಯವ ಕೊಳೆಯಿಸುವುದೆಲ್ಲವ ತೆಗೆದೆಸೆದಿರುವೆ ತಂಪಾದೆ... ಮುಕ್ತಳಾದೆ...”**

ಎರಡು ಸಾವಿರ ವರ್ಷಕ್ಕೂ ಹಿಂದೆ ರಚಿತವಾದ ಒಂದು ಥೇರೀಗಾಥಾ ಪದ್ಯವಿದು. ಬೌದ್ಧಧರ್ಮದ ಬೀಜಮಂತ್ರವನ್ನು ಹೆಣ್ಮನದ ಜರಡಿಯಲ್ಲಿ ಸೋಸಿ ತೆಗೆದಂತಿರುವ ಈ ಪದ್ಯಗಳು ಸಮಕಾಲೀನ ತಲ್ಲಣಗಳನ್ನೂ ಧ್ವನಿಸುವಂತಿವೆ.

ಥೇರಿಯರು ಎಂದರೆ ಹಿರಿಯ ಬೌದ್ಧ ಭಿಕ್ಕುಣಿಯರು. ಬುದ್ಧನ ಕಾಲದಲ್ಲಿ ಜೀವಿಸಿದ್ದ ಹಿರಿಯ ಭಿಕ್ಕುಣಿಯರು ರಚಿಸಿದ ಕವಿತೆಗಳ ಸಂಕಲನವೇ ಥೇರೀಗಾಥಾ. ಬುದ್ಧನ ನಂತರ ಬಂದ ಭಿಕ್ಕುಣಿಯರ ಕೆಲ ಕವಿತೆಗಳೂ ಇಲ್ಲಿ ಸೇರಿರಬಹುದು ಎನ್ನಲಾಗಿದೆ. ಮೂಲತಃ ಬೇರೆ ಬೇರೆ ದೇಶೀಯ ಭಾಷೆಗಳಲ್ಲಿ ರಚನೆಯಾಗಿದ್ದ ಈ ಪದ್ಯಗಳನ್ನು ಕ್ರಿ.ಪೂ. ಮೂರರಲ್ಲಿ ಪಾಲಿ ಭಾಷೆಗೆ ತಂದು ಸಂಕಲಿಸಲಾಯಿತು. ಭಾರತೀಯ ಸಮಾಜದಲ್ಲಿ ಮಹಿಳೆಯರ ದನಿಯ ಅತ್ಯಂತ ಪ್ರಾಚೀನ ದಾಖಲೆಗಳಲ್ಲಿ ಒಂದಾದ ಥೇರೀಗಾಥಾದಲ್ಲಿ 73 ಪದ್ಯಗಳಿವೆ.

‘ಥೇರೀಗಾಥಾ ಕಾಣಿಸಿದ ಹೆಣ್ಣು’ ಪುಸ್ತಕದಲ್ಲಿ ಲೇಖಕಿ ಶೈಲಜಾ ಅವರು, ಈ ಕೆಲವು ಪದ್ಯಗಳನ್ನು ಒರೆಗೆ ಹಚ್ಚುತ್ತಾ, ಅವುಗಳ ರಚನೆಗೆ ಜರೂರನ್ನು ಒದಗಿಸಿರಬಹುದಾದ ಒಂದು ಕಾಲದ ಸಾಮಾಜಿಕ, ಸಾಂಸ್ಕೃತಿಕ ಪಲ್ಲಟಗಳ ಮೇಲೆ ಬೆಳಕು ಚೆಲ್ಲುತ್ತಾರೆ. ಅದರ ವಿಸ್ತರಣೆಯಾಗಿ ಇಂದಿನ ಸ್ತ್ರೀ ಸಮೂಹದ ತಾಪ, ಗೊಂದಲಗಳನ್ನೂ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾರೆ. ಥೇರಿಯರ ಬದುಕಿನ ಚಿತ್ರಗಳನ್ನು ಕಟ್ಟಿಕೊಡುತ್ತಲೇ ಈ ಪುಸ್ತಕ ವರ್ತಮಾನದ